ಯಶೋಗಾಥೆ

ಹರಿಹರ ನಗರಸಭೆ

ಚಿಂದಿ ಆಯುವವರಿಂದ ಹರಿಹರ ನಗರದ ಕಸ ನಿರ್ವಹಣೆ

ಹರಿಹರ ನಗರಸಭೆಯು ದಾವಣಗೆರೆ ಜಿಲ್ಲೆಯ ಒಂದು ಪ್ರಮುಖ ನಗರ. ಘನ ತ್ಯಾಜ್ಯ ನಿರ್ವಹಣೆಯ ಕುರಿತಾಗಿ ಉಚ್ಚ ನ್ಯಾಯಾಲಯದ ಆದೇಶ ಮತ್ತು ನಗರಾಭಿವೃದ್ಧಿ ಇಲಾಖೆಯ ನಿರ್ದೇಶನದಂತೆ 2008 ರ ನಂತರ ನಗರದ ಮನೆಮನೆಗಳಿಂದ ಕಸವನ್ನು ಸಂಗ್ರಹಿಸಲು ನಿರ್ಧರಿಸಿತು. ಈ ಸಲುವಾಗಿ ಸ್ಥಳೀಯ ಸ್ವ ಸಹಾಯ ಸಂಘಗಳಿಗೆ 8 ವಾರ್ಡ್‌ಗಳನ್ನು ಕಸ ಸಂಗ್ರಹಿಸುವ ಕಾರ್ಯಕ್ಕೆ ವಹಿಸಲಾಯಿತು ಹಾಗೂ ಈ ಸ್ವ ಸಹಾಯ ಸಂಘಗಳಿಗೆ ಎನ್.ಜಿ.ಓ ಮತ್ತು ಬ್ಯಾಂಕ್ ನೆರವಿನಿಂದ 2 ಆಟೋ ಟಿಪ್ಪರ್ ಗಳನ್ನು ಒದಗಿಸಲಾಯಿತು. ಸದರಿ ಸಂಘಗಳು ವಾರ್ಡ್‌ನ ಮನೆಗಳವರು ಸರಿಯಾಗಿ ಸೇವಾಶುಲ್ಕ ನೀಡುತ್ತಿಲ್ಲ ಎಂಬ ಕಾರಣ ನೀಡಿ ಕಸ ಸಂಗ್ರಹಣೆಯ ಪ್ರಕ್ರಿಯೆಯಿಂದ ಹಿಂದೆ ಸರಿದರು. ಈ ಸಂದರ್ಭದಲ್ಲಿ ಕಸ ನಿರ್ವಹಣೆಯು ಕಷ್ಟಕರವಾಗಿದ್ದು ನಗರಸಭೆಯ ತಮ್ಮ ಪೌರಕಾರ್ಮಿಕರನ್ನು ಬಳಸಿ ಕಸವನ್ನು ನಿರ್ವಹಣೆ ಮಾಡುತ್ತಿತ್ತು.

ಕಸ ನಿರ್ವಹಣೆಯ ಸುಸ್ಥಿರತೆಗಾಗಿ ಪರ್ಯಾಯ ಮಾರ್ಗವನ್ನು ಅರಸುತ್ತಿದ್ದ ಸಂದರ್ಭದಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ನೀಡಿದ ಸಲಹೆಯು ಹರಿಹರದ ಕಸ ನಿರ್ವಹಣೆ ಮತ್ತು ವಿಂಗಡಣೆಯ ಸಮಸ್ಯೆಗೆ ತಾತ್ಕಾಲಿಕ ಮತ್ತು ಶಾಶ್ವತ ಪರಿಹಾರ ನೀಡಿದೆ. ನಗರದ ಚಿಂದಿ ಆಯುವ ಕುಟುಂಬದವರನ್ನು ಕಸ ಸಂಗ್ರಹಣೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವಂತೆ ಸಲಹೆ ನೀಡಿದರು.

ಮೊದಲನೆಯದಾಗಿ ಚಿಂದಿ ಆಯುವ ಕುಟುಂಬದವರ ಸಭೆಯನ್ನು ಕರೆಯಲಾಯಿತು. ಚಿಂದಿ ಆಯುವ ಕುಟುಂಬದವರಿಗೆ ಕಸ ನಿರ್ವಹಣೆಯಲ್ಲಿ ನಿಮ್ಮ ಸಹಕಾರ ಮತ್ತು ಪಾತ್ರದ ಮಹತ್ವ ಮತ್ತು ಅವಶ್ಯಕತೆಯನ್ನು ತಿಳಿಸಿ ಅವರಲ್ಲಿ 6 ಮಂದಿ ಚಿಂದಿ ಆಯುವವರನ್ನು ಕಸ ಸಂಗ್ರಹಣೆ ಮತ್ತು ವಿಲೇವಾರಿ ಪ್ರಕ್ರಿಯೆಗಾಗಿ ಆಯ್ಕೆ ಮಾಡಲಾಯಿತು. ಪ್ರತಿ ತಿಂಗಳಿಗೆ ರೂ. 3.000/- ವೇತನವನ್ನು ನಿಗಧಿ ಪಡಿಸಿತು ಮತ್ತು ಸುರಕ್ಷತೆಯ ದೃಷ್ಠಿಯಿಂದ ಮಾಸ್ಕ್ ಮತ್ತು ಗ್ಲೌಸ್ ಗಳನ್ನು ನೀಡಲಾಯಿತು. ವರ್ಷಕ್ಕೆ ಒಂದು ಬಾರಿ ಸಮವಸ್ತ್ರಗಳನ್ನು ನೀಡಲು ತೀರ್ಮಾನಿಸಲಾಯಿತು.

ಪ್ರಾರಂಭದ ದಿನಗಳಲ್ಲಿ ಚಿಂದಿ ಆಯುವ ಕೆಲಸದವರು ಕಸ ಸಂಗ್ರಹಣೆಯ ಪ್ರಕ್ರಿಯೆಯಲ್ಲಿ ಸರಿಯಾಗಿ ಭಾಗವಹಿಸುತ್ತಿರಲಿಲ್ಲ. ಗೈರುಹಾಜರಿಯ ಪ್ರಮಾಣ ಹೆಚ್ಚಾಗಿದ್ದಿತು. ನಂತರದ ದಿನಗಳಲ್ಲಿ ಮತ್ತೊಮ್ಮೆ ಚಿಂದಿ ಆಯುವ ಕುಟುಂಭದವರ ಸಭೆಯನ್ನು ಕರೆದು ಸರ್ಕಾರವು ತಮಗೆ ನೀಡಿರುವ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಹೇಳಲಾಯಿತು. ಸರ್ಕಾರದ ಸೌಲಭ್ಯಗಳನ್ನು ಮುಂದಿನ ದಿನಗಳಲ್ಲಿ ತಮ್ಮ ಸಮುದಾಯದ ಮತ್ತು ಕುಟುಂಬದವರಿಗೆ ದೊರಕುವಂತೆ ಮಾಡಲು ಈ ಕೆಲಸ ನೆರವಾಗುವುದೆಂದು ತಿಳಿಸಿ ಮನವೊಲಿಸಲಾಯಿತು. ಈ ಪ್ರಯತ್ನದಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತು ಚಿಂದಿ ಆಯುವ ಕೆಲಸಕ್ಕೆ ಆಯ್ಕೆಯಾಗಿದ್ದ 6 ಜನರು ಸರಿಯಾದ ಸಮಯಕ್ಕೆ ಕೆಲಸಕ್ಕೆ ಬಂದರು.

ಮೊದಲ ಹಂತವಾಗಿ ನಗರದ ಪ್ರಮುಖ ವಾಣಿಜ್ಯ ಮಳಿಗೆಗಳು ಮತ್ತು ಪ್ರಮುಖ ರಸ್ತೆಗಳನ್ನು ಕಸ ಸಂಗ್ರಹಣೆಗೆ ಆಯ್ಕೆ ಮಾಡಿಕೊಳ್ಳಲಾಯಿತು. ವಾಣಿಜ್ಯ ಮಳಿಗೆಗಳಿಂದ ಕಸ ಸಂಗ್ರಹಣೆ ಮಾಡಿದ್ದರ ಮಾಸಿಕ ಸೇವಾ ಶುಲ್ಕವನ್ನು ಸಂಗ್ರಹಿಸಲಾಯಿತು. ಈ ಪ್ರಯತ್ನಕ್ಕೆ ಉತ್ತಮ ಬೆಂಬಲ ದೊರೆಯಿತು.

ಚಿಂದಿ ಆಯುವ ಕುಟುಂಬದ ಹಿನ್ನೆಲೆಯಿಂದ ಬಂದ ಕಸ ಸಂಗ್ರಹಾಕರು ಹೆಚ್ಚು ದಕ್ಷತೆಯಿಂದ ಕಾರ್ಯ ನಿರ್ವಹಿಸಿದರು. ಕಸದಲ್ಲಿನ ಮರುಬಳಕೆ ಮತ್ತು ಪುನರ್ಬಳಕೆ ವಸ್ತುಗಳನ್ನು ಬೇರ್ಪಡಿಸಿ ಸಂಗ್ರಹಿಸಿದರು. ಈ ಬೇರ್ಪಡಿಸಿದ ಕಸವನ್ನು ಮಾರಿ ಬಂದ ಹಣವನ್ನು ನಗರಸಭೆಗೆ ಆದಾಯವನ್ನು ನೀಡಲಾಯಿತು. ಈ ಪ್ರಯೋಗವು ನಗರ ಸಭೆಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿದ್ದು, ಚಿಂದಿ ಆಯುವ ಕುಟುಂಬದ ಹಿನ್ನೆಲೆಯುಳ್ಳ ವ್ಯಕ್ತಿಗಳನ್ನೆ ಮುಂದಿನ ದಿನಗಳಲ್ಲಿ ಕಸ ಸಂಗ್ರಹಣೆ ಮತ್ತು ವಿಂಗಡಣೆಯ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಲು ಚಿಂತಿಸಲಾಗುತ್ತಿದೆ.